ಸರ್ಕಾರದ ಸಾಮಾಜಿಕ ಭದ್ರತೆಯಡಿಯಲ್ಲಿ ಜೀವನ ನೂಕುತ್ತಿರುವ ತನ್ನ ಚಿಕ್ಕಮ್ಮ! ಕರ್ನಲ್ ಸಾಹೇಬರು ಕೊಟ್ಟಿದ್ದ ಮಿಂಕ್ ಕೋಟು ಮಿಸೆಸ್ ಬ್ರಿಗ್ಸಳ ಜೀವನದಲ್ಲಿ ಬಿರುಗಾಳಿ ಎಬ್ಬಿಸುವ ಎಲ್ಲಾ ಸಾಧ್ಯತೆಗಳನ್ನು ಹೊಂದಿತ್ತು.

ಮಿಂಕ್ ಕೋಟನ್ನು ಜಾಗರೂಕತೆಯಿಂದ ಮತ್ತೆ ಬಾಕ್ಸಿನೊಳಗೆ ಪ್ಯಾಕ್ ಮಾಡಿ ಮಿಸೆಸ್ ಬ್ರಿಗ್ಸ್ ತನ್ನ ಆಸನದಲ್ಲಿ ಒಂದು ಕುಳಿತಳು.

ತಲೆಯೊಳಗೆ ಏನೆಲ್ಲಾ ಯೋಚನೆಗಳು...

'ಚಿಕ್ಕಮ್ಮನಲ್ಲದಿದ್ದರೆ, ಇಷ್ಟೊಂದು ಬೆಲೆಬಾಳುವ ಮಿಂಕ್ ಕೋಟನ್ನು ತನಗೆ ಕೊಟ್ಟವರಾರೆಂದು ತಲೆ ಕೆಡಿಸಿಕೊಳ್ಳದಿರುವಷ್ಟು ಮುಟ್ಠಾಳನೇ ಸಿರಿಲ್?!'

ಇನ್ನು ಕೆಲವೇ ತಾಸುಗಳಲ್ಲಿ ಆಕೆ ನ್ಯೂಯಾರ್ಕ್ ಮುಟ್ಟುವವಳಿದ್ದಳು. ರೈಲು ನಿಲ್ದಾಣದಿಂದ ಮನೆಗೆ ಹತ್ತು ನಿಮಿಷ. ಅವಳನ್ನು ಸ್ವಾಗತಿಸಲು ಸಿರಿಲ್ ಮುಂಬಾಗಿಲ ಬಳಿಯೇ ನಿಂತಿರುತ್ತಾನೆ. ತನ್ನ ಮಡದಿಗೆ ಯಾರೋ ಸಾವಿರಾರು ಡಾಲರುಗಳ ಮಿಂಕ್ ಕೋಟು ಪ್ರೆಸೆಂಟ್ ಮಾಡಿದ್ದಾರೆ ಎಂಬುದು ತಿಳಿದಾಗ ಆತನ ಮನಸ್ಸಿನಲ್ಲಿ ಏನೆಲ್ಲಾ ಪ್ರಶ್ನೆಗಳು ಏಳಬಹುದು?

ತನ್ನನ್ನು ಇಂತಹ ಇಕ್ಕಟ್ಟಿಗೆ ಸಿಲುಕಿಸಲೆಂದೇ ಕರ್ನಲ್ ಸಾಹೇಬರು ಈ ಆಟ ಹೂಡಿಲ್ಲ ತಾನೆ? ಈ ಗಂಡಸರನ್ನು ಯಾವತ್ತೂ ಸಂಪೂರ್ಣವಾಗಿ ನಂಬಬಾರದು. ಕೆಲಸ ಮುಗಿಸಿದ್ದೇ ತಡ, ಅಂಡಿನ ಮೇಲೆ ಒದ್ದು ಹೊರದೂಡಲೂ ಹೇಸುವುದಿಲ್ಲ! ಇಲ್ಲದಿದ್ದರೆ ನನ್ನ ಚಿಕ್ಕಮ್ಮನ ಆರ್ಥಿಕ ಪರಿಸ್ಥಿತಿ ಕರ್ನಲ್ ಸಾಹೇಬರಿಗೆ ಗೊತ್ತಿಲ್ಲದಿರುವುದೇ? ನನ್ನ ಫಜೀತಿಯನ್ನು ಊಹಿಸಿಕೊಂಡು ನಗುತ್ತಿರಬೇಕು ರ್‍ಯಾಸ್ಕಲ್! ಹಾಗಂತ ಮಿಸೆಸ್ ಬ್ರಿಗ್ಸ್ ಆ ಸುಂದರವಾದ ಮಿಂಕ್ ಕೋಟನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳಲು ತಯಾರಿರಲಿಲ್ಲ.

'ಏನೇ ಸಂಕಷ್ಟ ಎದುರಾದರೂ ಈ ಕೋಟನ್ನು ನನ್ನದಾಗಿಸಿಯೇ ತೀರುತ್ತೇನೆ.' ಮಿಸೆಸ್ ಬ್ರಿಗ್ಸ್ ನಿರ್ಧರಿಸಿದಳು.

ನ್ಯೂಯಾರ್ಕ್ ತಲುಪಲು ಇನ್ನೂ ಸಮಯವಿತ್ತು. ಸಿರಿಲ್ ಎಷ್ಟೇ ಬುದ್ಧಿವಂತನಾದರೂ, ಬೇರೆಲ್ಲಾ ಗಂಡಸರಷ್ಟೇ ದಡ್ಡನಾಗಿದ್ದ ಎಂಬುದು ಅವಳಿಗೆ ಗೊತ್ತಿಲ್ಲದಿರಲಿಲ್ಲ. ಅವಳೇ ಅವನನ್ನು ಎಷ್ಟೊಂದು ಸಲ ಯಾಮಾರಿಸಿಲ್ಲ?

ಕೊನೆಗೂ ರೈಲು ಪೆನ್ಸಿಲ್ವೇನಿಯಾ ಮುಟ್ಟಿತು. ಅಷ್ಟರಲ್ಲಿ ಮಿಸೆಸ್ ಬ್ರಿಗ್ಸಳ ತಲೆಯೊಳಗೆ ಒಂದು ಯೋಜನೆ ರೂಪುಗೊಂಡಿತ್ತು. ಮಿಸೆಸ್ ಬ್ರಿಗ್ಸ್ ರೈಲು ಇಳಿದು, ಸ್ಟೇಶನ್ ಹೊರಗೆ ನಡೆದು ಬಂದು ಟ್ಯಾಕ್ಸಿಯನ್ನು ಕೂಗಿದಳು.

"ಡ್ರೈವರ್, ಇಲ್ಲಿ ಹತ್ತಿರದಲ್ಲೇ ಎಲ್ಲಾದರೂ ಗಿರವಿ ಅಂಗಡಿ ಇದೆಯಾ?" ಟ್ಯಾಕ್ಸಿಯನ್ನು ಹತ್ತುತ್ತಲೇ ಮಿಸೆಸ್ ಬ್ರಿಗ್ಸ್ ಕೇಳಿದಳು.

ಡ್ರೈವರ್ ಕೆಲವು ಕ್ಷಣ ತಬ್ಬಿಬ್ಬಾಗಿ ಸಾವರಿಸಿಕೊಳ್ಳುತ್ತಾ, "ಆರನೇ ಅವೆನ್ಯೂವಿನಲ್ಲಿ ಬೇಕಾದಷ್ಟಿವೆ ಮೇಡಮ್." ಎಂದ.

"ಯಾವುದು ಮೊದಲು ಸಿಗುತ್ತೋ ಅಲ್ಲಿಗೆ ನಡಿ." ಎಂದಳು ಮಿಸೆಸ್ ಬ್ರಿಗ್ಸ್.

ಕೆಲವು ನಿಮಿಷಗಳ ನಂತರ ಟ್ಯಾಕ್ಸಿ ಒಂದು ಅಂಗಡಿಯ ಮುಂದೆ ನಿಂತಿತು.

"ಡ್ರೈವರ್, ನನಗಾಗಿ ವೇಯ್ಟ್ ಮಾಡು. ಈಗ ಬರುತ್ತೇನೆ." ಎಂದು ಹೇಳಿ ಮಿಸೆಸ್ ಬ್ರಿಗ್ಸ್ ಕೋಟಿನ ಬಾಕ್ಸನ್ನು ಹಿಡಿದುಕೊಂಡು ಆ ಗಿರವಿ ಅಂಗಡಿಯನ್ನು ಹೊಕ್ಕಳು.

ಕೌಂಟರಿನ ಬಳಿ ಯಾರೂ ಕಾಣಿಸಲಿಲ್ಲ. ಯಾರಾದರೂ ಬರಬಹುದೆಂದು ಮಿಸೆಸ್ ಬ್ರಿಗ್ಸ್ ಕಾದಳು.